‘ಇಲ್ಲ ಸನ್ಮತಿ, ಅವಳ ಆರೋಗ್ಯ ಸ್ವಲ್ಪ ಚೆನ್ನಾಗಿರಲಿಲ್ಲ. ಆದ್ದರಿಂದ ನಮ್ಮ ಜೊತೆ ಕರೆದುಕೊಂಡು ಬರಲಿಲ್ಲ. ಅವಳ ತಾಯಿ ತಂದೆ ಬಂದು ಕರೆದುಕೊಂಡು ಹೋದರು’

‘ಊಟ ತಿಂಡಿಗೆಲ್ಲ ಏನು ಮಾಡ್ತೀರಿ ಸರ್?’

‘ನಾವಿಬ್ರು ಸೇರಿ ಮಾಡ್ತೀವಿ’

ಉಳಿದ ಎಲ್ಲಾ ಕೆಲಸಗಳನ್ನೂ ಹೆಸರಿಸಿದಳು ಸನ್ಮತಿ.

‘ಇಬ್ಬರು ಹಂಚಿಕೊಂಡು ಎಲ್ಲಾ ಮಾಡ್ತೀವಿ’ ನರಹರಿಯೆಂದ.

‘ಕಷ್ಟ ಕಷ್ಟ’ ಎಂದು ಉದ್ಗರಿಸಿದ ಸನ್ಮತಿ, ‘ನೀವು ಇಷ್ಟು ಪಾಡು ಪಡಬೇಕಾಗಿಲ್ಲ. ಹತ್ತಿರವೇ ನಾನಿದೀನಲ್ಲಾ ಸರ್? ನಾನು ಬಂದು ಸಹಾಯ ಮಾಡ್ತೇನೆ’ ಸನ್ಮತಿಯೆಂದಳು.

‘ಈ ಕೆಲಸ ನೀನ್ಯಾಕೆ ಮಾಡ್ತಿ? ಎಲ್ಲಾ ಕೆಲಸ ನಾವು ಮಾಡಿಕೊಳ್ತೀವಿ’ ನರಹರಿಯೆಂದ.

‘ಈ ಕೆಲಸ ಆ ಕೆಲಸ ಅಂತ ನೋಡದೆ ಎಲ್ಲಾ ಕೆಲಸ ನಾನು ಮಾಡ್ತೀನಿ ಸರ್. ಮನೆಯಲ್ಲಿ ಒಬ್ಬಳೇ ಕುಳಿತು ಸಾಕಾಗಿ ಹೋಗಿದೆ. ಏನಾದರೂ ಕೆಲಸ ಮಾಡ್ದಿದ್ರೆ ಹುಚ್ಚು ಹಿಡಿದ ಹಾಗೆ ಆಗ್ತದೆ ಸರ್’

‘ಸ್ವಲ್ಪ ಹುಡುಕಿದ್ರೆ ಅಮೆರಿಕೆಯಲ್ಲಿ ಏನಾದರೂ ಕೆಲಸ ಸಿಗುತ್ತೆ ಸನ್ಮತಿ, ಟೀಚಿಂಗ್ ಡಿಗ್ರಿ ಇದೆಯಲ್ಲಾ, ಎಲ್ಲಾದ್ರೂ ಹಯರ್ ಸೆಕೆಂಡರಿ ಲೆವೆಲ್‌ಗೆ ಪಾಠ ಮಾಡೋ ಕೆಲಸ ಸಿಗುತ್ತೆ’

ಸನ್ಮತಿ ಸ್ವಲ್ಪ ಹೊತ್ತು ಸುಮ್ಮನಿದ್ದು ತಟ್ಟನೆ, ‘ನಾನು ಒಬ್ಬಳೇ ಇದೀನಿ ಸರ್. ಮುರಲಿಯನ್ನು ಅವನ ಕಂಪೆನಿಯವರು ಕೆನಡಕ್ಕೆ ಕಳಿಸಿದ್ದಾರೆ. ಆರು ತಿಂಗಳು ಅಲ್ಲೇ ಇರ್ತಾನೆ. ಯಾವುದಾದ್ರೂ ಕೆಲಸಕ್ಕೆ ಸೇರೋಣವೆಂದರೆ, ಎರಡು ವರ್ಷ ಇಂಡಿಯದಲ್ಲಿ ಟೀಚಿಂಗ್ ಮಾಡಿದ್ದೆ ನಿಜ. ಅದು ಇಲ್ಲಿ ಉಪಯೋಗಕ್ಕೆ ಬರಲ್ಲ. ಬೇರೆ ನಂಗೆ ಏನೂ ಗೊತ್ತಿಲ್ಲ. ಮುರಲಿ ಹೊರಟಾಗ, ‘ನಾನೂ ಬರ್ತೀನಿ’ ಅಂದೆ. ‘ನೀನು ಅಲ್ಲಿಗೆ ನಿನ್ನ ಎಲ್ಲಾ ಉಣ್ಣೆ ಬಟ್ಟೆಯನ್ನೂ ಹೊತ್ತುಕೊಂಡು ಬರ್ಬೇಕಾಗುತ್ತೆ. ಅಲ್ಲಿ ಒಂಟಿಯಾಗಿ ಒಂದು ಕೋಣೆಯಲ್ಲಿ ದಿನವಿಡೀ ಕುಳಿತುಕೊಂಡು ಚಳಿಯಲ್ಲಿ ನಡುಗುತ್ತಾ ಹೇಗೆ ಹೊತ್ತು ಕಳೀತಿ?’ ಅಂದ.

‘ಇಲ್ಲಿ ಸದ್ಯ ನಂಗೆ ದಿನ ಕಳೆಯುವುದೇ ಕಷ್ಟವಾಗಿದೆ’ ಎಂದು ತುಸು ಹೊತ್ತು ಮ್ಲಾನವದನಳಾಗಿ ಕುಳಿತುಕೊಂಡಿದ್ದ ಸನ್ಮತಿ.

‘ನಿಮ್ಮ ಮನೆಯಲ್ಲಿ ಏನು ಮಾಡಬೇಕೋ ಅದನ್ನೆಲ್ಲ ನನಗೆ ಬಿಡಿ ಸರ್. ನನ್ನ ಅಪೇಕ್ಷೆ ಏನೂ ಇಲ್ಲ. ನನಗೆ ಹೊತ್ತು ಹೋಗಬೇಕಾಗಿದೆ ಅಷ್ಟೆ’ ಎಂದಳು ಸನ್ಮತಿ.

ನರಹರಿ ಯಾವ ರೀತಿಯಲ್ಲಿ ಬೇಡವೆಂದರೂ ಒಳ ಹೋಗಿ ಪಾತ್ರೆ ತೊಳೆಯುವ ಕೆಲಸ ಆರಂಭಿಸಿ ಬಿಟ್ಟಳು ಸನ್ಮತಿ. ಸ್ವಲ್ಪ ಹೊತ್ತಿನ ಬಳಿಕ ಹೊರಬಂದು, ಯಾವುದು ಎಲ್ಲಿದೆ ಅಂತ ನಂಗೆ ಗೊತ್ತಿದೆ ಸರ್. ಈಗ ‘ನೀವು ಏನು ಕುಡೀತೀರಿ ಸರ್? ಕಾಫಿ ಮಾಡಿ ತರ್ತೀನಿ. ಚೆನ್ನಾಗಿಲ್ಲದಿದ್ರೆ, ಇನ್ನು ಈ ಮನೆಯೊಳಗೆ ಕಾಲಿಡಬೇಡ ಅಂತ ಹೇಳಿ. ಬರಲ್ಲ’ ಎಂದು ಹೇಳಿ ಮುಗುಳ್ನಕ್ಕು, ‘ನಿಮ್ಮ ಎಲ್ಲಾ ಆಹಾರ ಪಾನೀಯ ಯಾವುದು ಹೇಗೆ ಅಂತ ಶಾಲ್ಮಲಿಯಕ್ಕನಿಂದ ನಾನು ಕಲಿತುಕೊಂಡಿದ್ದೇನೆ’ ಎಂದು ಹೇಳಿ ಸನ್ಮತಿ ಒಳಹೋದಳು. ಅಡುಗೆ ಕೋಣೆಯಲ್ಲಿ ಮಾಡಬೇಕಾದ್ದನ್ನೆಲ್ಲ ಮಾಡಿ, ನೆಲ ಒರಸಿ, ಸಾಮಾನು ಸರಂಜಾಮು, ಪೀಠೋಪಕರಣಗಳನ್ನು ಒಪ್ಪವಾಗಿರಿಸಿ ಹೊರಬಂದು, ‘ನೀವು ಇಬ್ಬರೂ ಕೆಲಸಕ್ಕೆ ಹೋಗುವವರು. ಹಾಗಿರುವಾಗ ನನ್ನಿಂದಾಗುವುದನ್ನು ನಾನು ಮಾಡದಿದ್ದರೆ ನನಗೆ ತಿಂದದ್ದು ಜೀರ್ಣವಾದೀತಾ ಸರ್?’ ಎಂದು ನಕ್ಕಳು ಸನ್ಮತಿ.

14

ಶಾಲ್ಮಲಿಯ ತಾಯಿ ತಂದೆಯಿಂದ ಅವಳ ಆರೋಗ್ಯ ಸುಧಾರಿಸುತ್ತಿರುವ ಕುರಿತು ಅಪ್ಪ ಮಗನಿಗೆ ವಾರ್ತೆ ಬರುತ್ತಲೇ ಇತ್ತು. ಒಮ್ಮೆ, ಶಾಲ್ಮಲಿಯ ಅಮ್ಮ, ‘ಈಗ ಶಾಲ್ಮಲಿಯ ಆರೋಗ್ಯ ತುಂಬಾ ಚೆನ್ನಾಗಿದೆ. ನೀನು ಸುಮ್ನೆ ಇರು, ಮನೆ ಕೆಲಸ ಎಲ್ಲಾ ನಾನು ಮಾಡ್ತೀನಿ ಅಂತಿದಾಳೆ’ಎಂದಳು.

ಅದನ್ನು ಕೇಳಿ ನರಹರಿ ಮತ್ತು ಅಭಿಗೆ ಇನ್ನಿಲ್ಲದಷ್ಟು ಸಂತೋಷವಾಯಿತು. ಸುದ್ದಿ ತಿಳಿದ ಸನ್ಮತಿ ಬಹಳ ಸಂತೋಷವನ್ನು ವ್ಯಕ್ತಪಡಿಸಿ, ‘ಹೇಳಿ, ಏನು ಸಿಹಿ ತಿಂಡಿ ಮಾಡ್ಬೇಕು ಸರ್?’ಎಂದಾಗ ನರಹರಿಗೆ ‘ಏನೂ ಬೇಡ’ ಎನ್ನಲಾಗಲಿಲ್ಲ.

ಸನ್ಮತಿ, ‘ಸರಿ. ನಂಗೆ ಗೊತ್ತಿರೋದನ್ನ ನಾನು ಮಾಡ್ತೀನಿ ಸರ್’ ಎಂದಾಗ ನರಹರಿ ಮತ್ತು ಅಭಿ ಸಂತೋಷ ವ್ಯಕ್ತಪಡಿಸಿ ತಲೆಯಾಡಿಸಿದರು. ಸನ್ಮತಿ ಗಜರಿ ಹಲ್ವ ಮಾಡಿದಳು.

ಮರುದಿನವೇ ನರಹರಿ ಅಭಿಯೊಡನೆ, ‘ನಾನು ಭಾರತಕ್ಕೆ ಮರಳುವ ಎಲ್ಲಾ ಸಿದ್ಧತೆಯನ್ನೂ ಮಾಡಿಕೊಂಡಿದ್ದೇನೆ ಅಭಿ. ನೀನೇನು ಮಾಡ್ತಿ?’ ಎಂದು ಕೇಳಿದ.

‘ಇಲ್ಲಿ ನನ್ನ ಕೆಲಸ ಮುಂದರಿಯಲೇಬೇಕು ಅಪ್ಪಾ. ಎಷ್ಟು ವರ್ಷ ಅಂತ ಹೇಳೋಕಾಗಲ್ಲ. ಕಂಪೆನಿಗೆ ನನ್ನ ಅಗತ್ಯ ನನಗೆ ಕಂಪೆನಿಯ ಅಗತ್ಯ ಇರುವಷ್ಟು ಕಾಲ ಮಾಡ್ತೀನಿ. ವರ್ಷಕ್ಕೆ ಎರಡು ಮೂರು ಬಾರಿ ಅಮ್ಮನನ್ನು ಮತ್ತು ನಿನ್ನನ್ನು ಕಾಣಲು ಬಂದೇ ಬರ್ತೀನಿ. ನಾಲ್ಕೈದು ವರ್ಷ ನಾನು ಇಲ್ಲಿ ಈ ಕೆಲಸದಲ್ಲಿ ಮುಂದರಿಯಬೇಕು ಅಪ್ಪಾ, ನೀನು ಮನೆಗೆ ಹೋಗಿ ಅಮ್ಮನ ಈಗಿನ ಒಂದಷ್ಟು ಫೋಟೊ ಕಳಿಸು. ಆರು ತಿಂಗಳ ನಂತರ ಅಮ್ಮನನ್ನು ಮತ್ತು ನಿನ್ನನ್ನು ಕಾಣಲು ಬರ್ತೀನಿ. ಬಂದು, ಹದಿನೈದು ದಿನ ನಿಮ್ಮ ಜೊತೆ ಇರ್ತೀನಿ’ ಎಂದ ಅಭಿ.

ಒಂದು ದಿನ ಸನ್ಮತಿ ನರಹರಿಯ ಬಳಿ, ‘ಸರ್, ನೀವು ಯಾವಾಗ ಇಂಡಿಯಕ್ಕೆ ಹೋಗ್ತೀರಿ?’ ಎಂದು ಕೇಳಿದಳು.

‘ಐದಾರು ತಿಂಗಳಲ್ಲಿ ಹೋಗ್ಬೇಕೂಂತಿದೆ’ ನರಹರಿಯೆಂದ.

‘ಮತ್ತೆ ಅಮೆರಿಕೆಗೆ ಬರೋದಿಲ್ವಾ?’

‘ಇಲ್ಲ ಸನ್ಮತಿ’

‘ನನಗೆ ಕೂಡ ಇಂಡಿಯಕ್ಕೆ ಹೋಗ್ಬೇಕು. ಅಪ್ಪ ಅಮ್ಮನ ಮನಸ್ಸು ಈಗ ಮೆತ್ತಗಾಗಿರ್ಬಹುದು ಅಂತನಿಸುತ್ತೆ. ನನ್ನ ಹತ್ರ ಮಾತಾಡ್ತಾರೊ ಇಲ್ಲವೊ ಗೊತ್ತಿಲ್ಲ. ಆದರೆ ನಂಗೆ ಅವರನ್ನು ಒಮ್ಮೆ ಕಾಣಲೇ ಬೇಕು. ಹಾಗೆ ಹೋದರೆ ಒಮ್ಮೆ ನಿಮ್ಮ ಮನೆಗೂ ಬರ್ತೇನೆ. ಅಷ್ಟರಲ್ಲಿ ಶಾಲ್ಮಲಿಯಕ್ಕ ಕೂಡ ನಿಮ್ಮ ಜೊತೆ ಇರಬಹುದು. ನೀವಿರುವ ಊರು ಜಾಗದ ಹೆಸರು ಹೇಳಿದರೆ ನಾನು ಖಂಡಿತ ಬರ್ತೇನೆ. ನಿಮ್ಮಿಬ್ಬರನ್ನೂ ಕಾಣುವ ಅವಕಾಶ ಸಿಗ್ತದೆ. ಮುರಲಿಯಿಂದ ಮೆಸೇಜ್ ಬಂದ ಮೇಲೆ ನಾನು ಅಮೆರಿಕೆಗೆ ವಾಪಾಸಾಗುತ್ತೇನೆ’ ಎಂದಳು. ನರಹರಿ ಅವಳಿಗೆ ತಾವಿರುವ ಊರಿನ ಹೆಸರು ಮನೆಯಿರುವ ಜಾಗದ ಹೆಸರು ಹೇಳಿದ. ‘ಮನೆಯ ಹೆಸರು ಏನು ಸರ್?’ ಎಂದು ಸನ್ಮತಿ ಕೇಳಿದಳು.

‘ಮನೆಗೆ ಹೆಸರು ಇರಿಸಿಲ್ಲ. ಮನೆಗೆ ಹೆಸರಿಡುವುದರಲ್ಲಿ ನನಗೆ ಆಸಕ್ತಿ ಇಲ್ಲ. ಶಾಲ್ಮಲಿ ಮತ್ತು ಅಭಿಗೆ ಕೂಡ ಇಲ್ಲ’

‘ನಾನು ಒಂದು ದಿನ ಆನೆಮಹಲಿನಲ್ಲಿ ನಿಮ್ಮಲ್ಲಿದ್ದು, ಅನಂತರ ಅಪ್ಪ ಮತ್ತು ಅಮ್ಮನನನ್ನು ಕಾಣಲು ದಾವಣಗೆರೆಗೆ ಹೋಗ್ತೇನೆ. ಅಲ್ಲಿಂದ್ಲೇ ನನ್ನ ಒಬ್ಬನೇ ಅಣ್ಣನನ್ನು ಕಾಣಲು ಗುಲ್ಬರ್ಗಕ್ಕೆ ಹೋಗ್ತೇನೆ. ಅಮರೇಶ ದುಬೈಯಲ್ಲಿ ತುಂಬಾ ಒಳ್ಳೆಯ ಕೆಲಸದಲ್ಲಿ ಇದ್ದ. ಸಾಕಷ್ಟು ಸಂಪಾದನೆ ಕೂಡ ಮಾಡಿದ್ದ. ಕೆಲವು ವರ್ಷಗಳ ಹಿಂದೆ ಅತ್ತಿಗೆ ಕಿಡ್ನಿ ಫೆಲ್ಯೂರ್ ಆಗಿ ತೀರಿಕೊಂಡಳು. ಮತ್ತೆರಡು ತಿಂಗಳ ನಂತರ, ಒಂದು ರೋಡ್ ಆಕ್ಸಿಡೆಂಟಿನಲ್ಲಿ ಅಮರೇಶಣ್ಣನ ಒಂದು ಕಾಲು ಫ್ರಾಕ್ಚರ್ ಆಯಿತು. ಮೂರು ತಿಂಗಳು ಆಸ್ಪತ್ರೆಯಲ್ಲಿ ಬೆಡ್ಡಿನಲ್ಲೇ ಇರಬೇಕಾಯಿತು. ಆದರೆ ಅಮರೇಶ ಬಹಳ ಸಾಮರ್ಥ್ಯಶಾಲಿ. ಆತ್ಮವಿಶ್ವಾಸ ಸಹ ಅಪಾರ. ಪುನಃ ದುಬೈಗೆ ಹೋದ ಪುನಃ ಐದು ವರ್ಷ ಕೆಲಸ ಮಾಡಿದ. ಅನಂತರ ಊರಿಗೆ ಬಂದು ಇನ್ನು ಕಾಲಿಗೂ ಕೈಗೂ ವಿಶ್ರಾಂತಿ ಬೇಕು ಎಂದುಕೊಂಡು ನಾಲ್ಕೈದು ವರ್ಷ ಅಪ್ಪ ಅಮ್ಮನ ಜೊತೆ ಇದ್ದ. ಮನೆಯಲ್ಲಿ ಎಲ್ಲಾ ಕೆಲಸವನ್ನೂ ಮಾಡುತ್ತಿದ್ದ. ಅಮ್ಮನಿಗೆ ಏನೂ ಕೆಲಸ ಮಾಡಲು ಬಿಡದೆ, ಅಡಿಗೆ ಪಾತ್ರೆ ತೊಳೆಯುವುದು, ಮನೆಯ ನೆಲವನ್ನು ಒಂದಿಷ್ಟೂ ಮಲಿನವಾದರೂ ಸ್ವಚ್ಛಗೊಳಿಸುವುದು ಎಲ್ಲವನ್ನೂ ಮಾಡುತ್ತಿದ್ದ. ಬಹಳ ಚೆನ್ನಾಗಿ ಅಡುಗೆ ಮಾಡ್ತಾನೆ. ಇತ್ತೀಚೆಗೆ ಅದೇನು ಆಯಿತೊ ಅಪ್ಪನ ಜೊತೆ ಜಗಳ ಆಯಿತು. ಯಾಕೆ ಅಂತ ನನಗೆ ಸ್ಪಷ್ಟವಾಗಿ ಗೊತ್ತಿಲ್ಲ. ಬಹುಶಃ ಅಣ್ಣ ಆಸ್ತಿಯಲ್ಲಿ ಪಾಲು ಕೇಳಿದ್ದರಿಂದ ಅಂತ ತೋರ್ತದೆ. ಎಲ್ಲ ನಾನು ಮದುವೆಯಾಗಿ ಅಮೆರಿಕೆಗೆ ಹೋದ ಮೇಲೆ ನಡೆದದ್ದು. ಅಮರೇಶ ಒಂಟಿಯಾಗಿಯೇ ಇದ್ದ. ಅಪ್ಪ ಅಮ್ಮನ ಜೊತೆ ಮಾತ್ರವಲ್ಲ, ನನ್ನ ಜೊತೆ ಕೂಡ ಸಂಪರ್ಕ ಇರಲಿಲ್ಲ. ಅವನನ್ನು ಕಂಡು ಬರಬೇಕು ಅಂತ ತೀರ್ಮಾನಿಸಿದ್ದೇನೆ. ಅವನ ಮತ್ತು ಅಪ್ಪ ಅಮ್ಮನ ನಡುವೆ ನಡೆದದ್ದು ಏನು ಎಂದು ತಿಳಿದು ಅಪ್ಪ ಅಮ್ಮ ಮೊದಲಿನಂತಾಗಲು ಪ್ರಯತ್ನಿಸಬೇಕು. ಇನ್ನು ಸಂಪಾದಿಸಿದ್ದು ಸಾಕು, ಊರಲ್ಲೇ ಎಲ್ಲಿಯಾದರೂ ಶಾಂತಿ ಸಮಾಧಾನದಿಂದ ತಣ್ಣಗೆ ಇರಬೇಕು ಅಂತ ಹೇಳ್ತಿದ್ದಾನೆ.

**(ಸಶೇಷ)**